**ದಿನಾಂಕ: 06.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

## ಪಾಟೀಸವಾಲು: ಪ್ರತಿವಾದಿಪರ ವಕೀಲರಾದ ಶ್ರೀ ಎಸ್.ಎನ್.ಎನ್ ಅವರಿಂದ–

1. ನನ್ನ ಹೆಸರು ಹೆಚ್.ಆರ್.ಜಗದೀಶ್. ನನ್ನ ಸಾಕ್ಷಿ ಪ್ರಮಾಣ ಪತ್ರದ ಅಂಶಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರ ನಾನು ನೋಟರಿ ಅವರ ಸಮಕ್ಷಮ ಪ್ರಮಾಣೀಕರಿಸಿರುತ್ತೇನೆ. ನೋಟರಿ ಅವರ ಹೆಸರು ನನಗೆ ಗೊತ್ತಿಲ್ಲ. ನೋಟರಿ ಅವರ ಬಳಿ ನಾನು ರಿಜಿಸ್ಟರ್ ನಲ್ಲಿ ರುಜು ಮಾಡಿಲ್ಲ. ಸದರಿ ರಿಜಿಸ್ಟರ್ ನಲ್ಲಿ ನಮ್ಮ ವಕೀಲರು ರುಜು ಮಾಡಿರುತ್ತಾರೋ, ಇಲ್ಲವೊ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರ ಪ್ರಮಾಣೀಕರಿಸಲು ನಮ್ಮ ವಕೀಲರು ನನ್ನ ಜೊತೆ ಬಂದಿರಲಿಲ್ಲ.

2. ನಾನು 1993–94ರ ಸಾಲಿನಿಂದ ಪತ್ರಬರಹಗಾರನಾಗಿದ್ದೇನೆ. ನಾನು ಸರಕಾರದಿಂದ ಲೈಸನ್ಸ್ ಪಡೆದಿರುತ್ತೇನೆ. ಸದರಿ ಲೈಸನ್ಸ್ ಅನ್ನು ಜಿಲ್ಲಾ ನೊಂದಾಣಾಧಿಕಾರಿಗಳು ಪ್ರತಿವರ್ಷ ರಿನಿವ್ ಮಾಡುತ್ತಾರೆ. ಸದರಿ ನನ್ನ ಲೈಸನ್ಸ್ ಅನ್ನು ನಾನು ಹಾಜರುಪಡಿಸಿಲ್ಲ , ಈ ಬಗ್ಗೆ ಕೇಳಿಲ್ಲ ಆದ್ದರಿಂದ ನಾನು ಹಾಜರುಪಡಿಸಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಮ್ಮ ಲೈಸನ್ಸ್ ಏಪ್ರಿಲ್–01 ರಂದು ಪ್ರತಿವರ್ಷ ರಿನಿವ್ ಆಗಬೇಕು.

3. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ನನಗೆ ಗೊತ್ತಿಲ್ಲ. ಪತ್ರ ಬರಹಗಾರರಾದ ನಾವು ಕಾನೂನು ಪ್ರಕಾರ ಒಂದು ರಿಜಿಸ್ಟರ್ ಮೈನ್ಟೇನ್ ಮಾಡಬೇಕು ಎಂದರೆ ಸರಿ. ಅದರಲ್ಲಿ ನಾವು ಬರೆದ ಎಲ್ಲಾ ಪತ್ರಗಳ ಬಗ್ಗೆ ನಮೂದು ಮಾಡಬೇಕು ಎಂದರೆ ಸರಿ.

4. ನಾನು ಕ್ರಯಪತ್ರ, ವ್ಯವಸ್ಥಾ ಪತ್ರ, ದಾನಪತ್ರ, ಮರಣ ಶಾಸನ ಪತ್ರ ಬರೆಯುತ್ತೀನಿ. ಸದರಿ ಪತ್ರಗಳಿಗೆ ಸಂಬಂಧಪಟ್ಟಂತೆ ಪಾರ್ಟಿಗಳ ಹೆಸರು, ದಿನಾಂಕ ಎಲ್ಲವನ್ನು ರಿಜಿಸ್ಟರ್ ನಲ್ಲಿ ನಮೂದು ಮಾಡಬೇಕು ಎಂದರೆ ಸರಿ. ಸಾಮಾನ್ಯವಾಗಿ ರಿಜಿಸ್ಟರ್ನಲ್ಲಿ ಆ ದಿನ ಬರೆದ ಪತ್ರಗಳನ್ನು ಸಿರಿಯಲ್ ನಂಬರ್ ಪ್ರಕಾರ ನಮೂದು ಮಾಡಬೇಕು ಎಂದರೆ ಸರಿ.

5. ನಿಪಿ.3 ದಸ್ತವೇಜಿನಲ್ಲಿ ನನ್ನ ರಿಜಿಸ್ಟರೇಷನ್ ನಂಬರ್ ದಾಖಲು ಮಾಡಿರುತ್ತೀರಾ ಎಂಬ ಪ್ರಶ್ನೆಗೆ ನಾವು ಮಾಡುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಯಾಮವಳಿಗಳ ಪ್ರಕಾರ ನಮ್ಮ ರಿಜಿಸ್ಟರೇಷನ್ ನಂಬರ್ ಬರೆಯಬೇಕು ಎಂದರೆ ಆ ರೀತಿ ನಮಗೆ ತಿಳುವಳಿಕೆ ನೀಡಿಲ್ಲ, ಹಾಗಾಗಿ ಬರೆಯುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ.4 ರಲ್ಲಿ ಸಹ ನಾನು ರಿಜಿಸ್ಟರೇಷನ್ ನಂಬರ್ ನಮೂದು ಮಾಡಿಲ್ಲ ಎಂದರೆ ಸರಿ.

6. ನಾನು ನನ್ನ ಲೈಸನ್ಸ್ ಅನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ, ಕೇಳಿದರೆ ಕೊಡುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ನನ್ನ ಲೈಸನ್ಸ್ ಅನ್ನು ನಿಪಿ.3,4 ಮಾಡುವ ದಿನಾಂಕದಂದು ವಾಲಿಡಿಟಿ ಒಳಗೆ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಆ ಬಗ್ಗೆ ತಿಳುವಳಿಕೆ ಕೊಟ್ಟಿಲ್ಲ, ಆದ್ದರಿಂದ ಹಾಜರುಪಡಿಸಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

7. ನಾನು ಕಂಪ್ಯೂಟರ್ ಸಿಸ್ಟಮ್ ಇಟ್ಟುಕೊಂಡಿರುತ್ತೇನೆ. ನಿಪಿ.3,4 ಅನ್ನು ನಮ್ಮ ಕಚೇರಿಯಲ್ಲಿ ಪ್ರಿಂಟ್ ಮಾಡಲಾಗಿದೆ ಎಂದರೆ ಸರಿ. ನಿಪಿ.3,4 ಅನ್ನು ನಾನು ಸಂಬಂಧಪಟ್ಟ ಪಾರ್ಟಿ ತಿಳುವಳಿಕೆ ಮೇರೆಗೆ ತಯಾರಿಸಿರುತ್ತೇನೆ. ನಿಪಿ.3,4 ತಯಾರಿಸುವ ಮೊದಲು ಡ್ರಾಫ್ಟ್ ನೀಡಿದ್ದೆ. ಸಂಬಂಧಪಟ್ಟ ಪಾರ್ಟಿಗಳು ಸರಿಯಾಗಿದೆ ಎಂದು ಹೇಳಿದ ನಂತರ ನಿಪಿ.3,4 ತಯಾರಿಸಿರುತ್ತೇನೆ. ಸದರಿ ಹಾಜರುಪಡಿಸಿಲ್ಲ, ಏಕೆಂದರೆ ಮೂಲಪತ್ರ ತಯಾರಾದ ನಂತರ ಅದನ್ನು ನಾಶಪಡಿಸುತ್ತೇವೆ.

8. ನಿಪಿ.3,4 ರ ಛಾಪ ಕಾಗದ ಪತ್ರವನ್ನು ಡಾಕ್ಯೂಮೆಂಟ್ ಶೀಟ್ ಗೆ ಸಂಬಂಧಪಟ್ಟಂತೆ ಹಣ ಜಮಾ ಮಾಡಬೇಕು ಅದನ್ನು ನಾವು ಮಾಡುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ಅದರ ಬೆಲೆ 2/– ರೂ. ಮಾತ್ರ. ಸದರಿ ಪ್ರಿಂಟೆಡ್ ಶೀಟ್ಗಳು ನಮ್ಮ ನೊಂದಣಿ ಸೊಸೈಟಿ ಯಲ್ಲಿ ಸಿಗುತ್ತವೆ. ಸದರಿ ನೊಂದಣಿ ಸೊಸೈಟಿಯಿಂದ ನಾವು ಪ್ರಿಂಟೆಡ್ ಶೀಟ್ಗಳನ್ನು ಸಾವಿರಗಟ್ಟಲೆ ತಂದು ಇಟ್ಟುಕೊಳ್ಳುತ್ತೇವೆ. ಸದರಿ ಡಾಕ್ಯೂಮೆಂಟ್ ಶೀಟ್ ಸೊಸೈಟಿಯದ್ದಲ್ಲ, ಅದನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಇಲ್ಲಿಂದ ಪಡಯಬೇಕು ಎಂದರೆ ಸರಿಯಲ್ಲ.

9. ನಿಪಿ.3 ಅನ್ನು ಬರೆಯಲು ಎಷ್ಟು ಶೀಟ್ಗಳನ್ನು ಉಪಯೋಗಿಸಿರುತ್ತೇನೆ ನೆನಪಿಲ್ಲ. ದಿಃ 29.12.2015 ರ ದಸ್ತವೇಜು ಬರೆಯಲು ಎಷ್ಟು ಶೀಟ್ಗಳನ್ನು ಉಪಯೋಗಿಸಿರುತ್ತೇನೆ ನೆನಪಿಲ್ಲ. ನೋಡಿದರೆ ಹೇಳಬಹುದು. ದಿಃ 07.12.2012 ರ ದಸ್ತವೇಜು ಬರೆಯುವಾಗ ಏನು ನಡಾವಳಿ ನಡೆಯಿತು ಎಂಬ ಪ್ರಶ್ನೆಗೆ ಪತ್ರ ನೋಡದೆ ಯಾರು ಯಾರು ಪಾರ್ಟಿಗಳು ಆ ದಿನ ಬಂದಿದ್ದರು ಹೇಳಲು ಆಗುವುದಿಲ್ಲ. ಮೂಲದಾಖಲಾತಿ ನೋಡಿದರೆ ಆ ದಿನ ಎಷ್ಟು ಜನ ಬಂದಿದ್ದರು ಹೇಳಬಹುದು. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸುವಾಗ ನಮ್ಮ ವಕೀಲರು ನನಗೆ ಜೆರಾಕ್ಸ್ ಪ್ರತಿ ತೋರಿಸಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ.

**10.** ನಿಪಿ.**3** ಜಮೀನಿನ ಬಗ್ಗೆ ಇರುವ ದಸ್ತವೇಜು ಆಗಿದ್ದು**,** ಸಾಲದ ವ್ಯವಹಾರ ಅಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ವಾದಿ ಆಶಾ ಅವರ ಗಂಡನ ಹೆಸರು ರಾಜು ಎಂದರೆ ಸರಿ. ಸದರಿ ರಾಜು ಹಾಗೂ ನಾನು ಸ್ನೇಹಿತರು ಎಂದರೆ ಸರಿಯಲ್ಲ.

**11.** ನಿಪಿ.**3** ಅನ್ನು ಶಿವಣ್ಣ**,** ಅವರ ಹೆಂಡತಿ ಉಮಾ**,** ಅವರ ಮಗ ಅನಿಲ್ ಅವರು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ.**3** ಅನ್ನು ನಾನೇ ಬೆರಳಚ್ಚು ಮಾಡಿ, ಪ್ರಿಂಟ್ ಮಾಡಿರುತ್ತೇನೆ. ನಾನು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಅಂಶಗಳು ಸುಳ್ಳಾಗಿರುತ್ತದೆ ಎಂದರೆ ನಿಪಿ.**3,4** ರ ಜೆರಾಕ್ಸ್ ಪ್ರತಿಗಳನ್ನು ನನಗೆ ತೋರಿಸಿದ್ದರ ಮೇರೆಗೆ ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

12. ನಿಪಿ.3 ರಲ್ಲಿ ನನ್ನ ರಿಜಿಸ್ಟ್ರೇಷನ್ ಸಂ.7291 ಎಂದು ನಮೂದಾಗಿರುತ್ತದೆ ಎಂದರೆ ಸರಿ. ಅದೇ ಸಂಖ್ಯೆಯನ್ನು ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುತ್ತೇನೆ ಎಂದರೆ ನಾನು ಜೆರಾಕ್ಸ್ ಪ್ರತಿ ನೋಡಿ ಅದನ್ನು ನಮೂದು ಮಾಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

13. ನಿಪಿ.4 ರಲ್ಲಿ ರಿಜಿಸ್ಟ್ರೇಷನ್ ಸಂ.10361 ತಾ:29.12.2015 ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ.4 ರಲ್ಲಿ 4 ಜನ ರುಜು ಮಾಡಿರುತ್ತಾರೆ. ಅವರ ಹೆಸರು ಶಿವಣ್ಣ, ಉಮಾ, ಅನಿಲ್ ಹಾಗೂ ಅಕಿಲ್ ಆಗಿರುತ್ತದೆ. ನಿಪಿ.3 ರಲ್ಲಿ ಒಟ್ಟು 13,48,750/- ರೂ. ಕ್ರಯದ ಮೊತ್ತವಾಗಿದ್ದು, ಮುಂಗಡ 3 ಲಕ್ಷ ಪಡೆದಿರುತ್ತಾರೆ ಎಂದು ನಮೂದು ಮಾಡಲಾಗಿದೆ. ಆ ಸಮಯ ವಾದಿ ಆಶಾ ಅವರ ಗಂಡ ರಾಜು ಬಂದಿರಲಿಲ್ಲ.

14. ನಿಪಿ.4 ರ ಪ್ರಕಾರ 2 ಲಕ್ಷ ಸಂದಾಯವಾಗಿರುತ್ತದೆ. ನಿಪಿ.3,4 ಅನ್ನು ನಾನು ಹಾಗೂ ವಾದಿ ಗಂಡ ರಾಜು ಅವರು ಶಾಮೀಲಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸುಳ್ಳು. ನಿಪಿ.3 ರಲ್ಲಿ 1 ನೇ ಸಾಕ್ಷಿ ಮಾದೇವ ಬಿನ್ ಮೊಗಣ್ಣ, 2 ನೇ ಸಾಕ್ಷಿದಾರರು ವೆಂಕಟೇಶ್ ಬಿನ್ ದಾಸೇಗೌಡ ಆಗಿರುತ್ತಾರೆ ಎಂದರೆ ಸರಿ. ಸದರಿ ಸಾಕ್ಷಿದಾರರ ವಿಳಾಸವನ್ನು ನಾನು ನನ್ನ ಹಸ್ತಾಕ್ಷರದಲ್ಲಿ ಬರೆದಿರುತ್ತೇನೆ ಎಂದರೆ ಸರಿ. ನಿಪಿ.4 ರಲ್ಲಿ ಸಹ ಸಾಕ್ಷಿದಾರರ ಹೆಸರು ಹಾಗೂ ವಿಳಾಸವನ್ನು ನಾನು ನನ್ನ ಹಸ್ತಾಕ್ಷರದಲ್ಲಿ ಬರೆದಿರುತ್ತೇನೆ ಎಂದರೆ ಸರಿ.

15. ನಿಪಿ.3 ರ ಒಕ್ಕಣೆಯನ್ನು ನಾನು ಹಾಗೂ ವಾದಿ ಗಂಡ ರಾಜು ಅವರು ಶಾಮೀಲಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.4 ರ ಒಕ್ಕಣೆಯಲ್ಲಿ ಹಿಂದಿನ ಪತ್ರವನ್ನು ನಿಪಿ.3 ರ ಒಕ್ಕಣಿಕೆ ಬಗ್ಗೆ ನಮೂದು ಮಾಡಿರುತ್ತೇವೆ ಎಂದರೆ ಸರಿ. ನಿಪಿ.3 ರ ಪ್ರಕಾರ ವಾದಿ 3 ವರ್ಷದ ವಾಯಿದೆ ತೆಗೆದುಕೊಂಡಿರುತ್ತಾರೆ. ನಿಪಿ.4 ರ ಪ್ರಕಾರ ಪುನಃ 3 ವರ್ಷದ ವಾಯಿದೆ ತೆಗೆದುಕೊಂಡಿರುತ್ತಾರೆ. ನಿಪಿ.4 ರಲ್ಲಿ ಎಷ್ಟು ಲಕ್ಷ ಸಾಲ ಕೊಡಲಾಗಿದೆ ಎಂದು ನಮೂದಾಗಿದೆ ಎಂಬ ಪ್ರಶ್ನೆಗೆ ಅದು ಸಾಲ ಅಲ್ಲ ಪತ್ರ ಮಾಡಿಕೊಡಲು 2 ಲಕ್ಷ ಹಣ ಪಡೆದ ಬಗ್ಗೆ ನಮೂದಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ.

16. ನಿಪಿ.4 ರ ಪ್ರಕಾರ ವಾದಿಯಿಂದ ಪ್ರತಿವಾದಿ ಸಾಲ ಪಡೆದಿಲ್ಲ ಎಂದರೆ ಸರಿ. ನಿಪಿ.4 ರ ಪ್ರಕಾರ ವಾದಿ, ಪ್ರತಿವಾದಿಯರಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ.4 ರಲ್ಲಿ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇವೆ ಎಂದು ನಮೂದು ಮಾಡಿರುತ್ತಾರಾ ಎಂಬ ಪ್ರಶ್ನೆಗೆ ನಿಪಿ.4 ರ 2 ನೇ ಪುಟದ 2 ನೇ ಸಾಲನ್ನು ತೋರಿಸಿ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇವೆ ಎಂದು ನಮೂದು ಮಾಡಲಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ನಿಪಿ.4 ರಲ್ಲಿ ವಾದಿಯಿಂದ ಪ್ರತಿವಾದಿಯರು ಸಾಲ ಪಡೆಯದೆ ಇದ್ದರೂ ಸಹ ಪಡೆದುಕೊಂಡಿದ್ದಾರೆ ಎಂದು ಉದ್ದೇಶಪೂರ್ವಕ ವಾದಿಯ ಗಂಡನ ಜೊತೆ ಶಾಮೀಲಾಗಿ ಬರೆದಿರುತ್ತೇನೆ ಎಂದರೆ ಸುಳ್ಳು.

17. ನಿಪಿ.3,4 ರ ಕರಡು ಪತ್ರ ತಯಾರು ಮಾಡಿದವರು ಹೆಚ್.ಆರ್. ಜಗದೀಶ್, 1993–94 ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ನಾನು ನನ್ನ ಲೈಸನ್ಸ್ ರಿನಿವಲ್ ಡೇಟ್ ನಮೂದು ಮಾಡಿಲ್ಲ ಎಂದರೆ ಆ ರೀತಿ ಮಾಡಬೇಕು ಎಂದು ನಡಾವಳಿಗಳಲ್ಲಿ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಉದ್ದೇಶಪೂರ್ವಕವಾಗಿ ವಾದಿ ಆಶಾ, ವಾದಿಯ ಗಂಡನ ರಾಜು ಅವರ ಜೊತೆ ಶಾಮೀಲಾಗಿ ನಿಪಿ.3,4 ಪತ್ರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸುಳ್ಳು. ಪ್ರತಿವಾದಿ 2 ಲಕ್ಷ ಸಾಲವಾಗಿ ಪಡೆದಿಲ್ಲ ಅದನ್ನು ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸುಳ್ಳು. ನಾನು ಹಾಗೂ ವಾದಿ ಗಂಡ ರಾಜು ಸ್ನೇಹಿತರಾಗಿದ್ದರಿಂದ ಅವುಗಳನ್ನು ಸೃಷ್ಟಿಮಾಡಿರುತ್ತೇವೆ ಎಂದರೆ ಸುಳ್ಳು.

ಮರುವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.